ಕ್ರಿ. ಮಿಸ್ 75-2024

ಪಿ..ಡಬ್ಲ್ಯೂ: 01

**ದಿನಾಂಕ: 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಅರ್ಜಿದಾರರ ಪರ ಕೆ.ಎಚ್.ಎಚ್. ವಕೀಲರಿಂದ:**

1. ನಾನು ಪಿ.ಯು.ಸಿ.ವರೆಗೆ ವಿಧ್ಯಾಬ್ಯಾಸ ಮಾಡಿರುತ್ತೇನೆ. ಮದುವೆ ಮುಂಚೆ ಮಾತುಕತೆ ಮಾಡುತ್ತಾರೆ ಎಂದರೆ ಸರಿ. ಸದರಿ ಮಾತುಕತೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮದುವೆ ಸಮಯದಲ್ಲಿ ಯಾದಿ ಬರೆಯಲಾಗಿರುತ್ತದೆ. ಸದರಿ ಯಾದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಾತುಕತೆ ಸಮಯದಲ್ಲಿ ವರದಕ್ಷಣೆ ನೀಡುವುದು ಮತ್ತು ಕೊಡುವುದು ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿ. ಮದುವೆ ಸಮಯದಲ್ಲಿ ಕೋರನಾ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಮದುವೆಗೆ ಎಷ್ಟು ಜನ ಹಾಜರಾಗಬೇಕು ಎಂಬುದರ ಬಗ್ಗೆ ನಿಯಮ ಇತ್ತು ಎಂದರೆ ಸರಿ. ಆ ಕಾರಣ ಮದುವೆ ಆಡಂಬರದ ಮದುವೆ ಆಗಿರಲಿಲ್ಲ ಎಂದರೆ ಸರಿಯಲ್ಲ.

2. ಮದುವೆಯ ಸಮಯದಲ್ಲಿ ವರದಕ್ಷಣೆ ನೀಡುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯ ಸಮಯದಲ್ಲಿ ಎದುರುದಾರನು ಚಾಮರಾಜಪೇಟೆಯಲ್ಲಿ ಪೋಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂದರೆ ಸರಿ.

3. ಮದುವೆಯ ನಂತರ ನಾನು ಮತ್ತು ಎದುದುರಾರರು ಚೆನ್ನಾಗಿ ಇದ್ದೇವು ಎಂದರೆ ಸರಿಯಲ್ಲ. ಮದುವೆಯಾದ ನಂತರ ಒಂದೂವರೆ ತಿಂಗಳು ಗಂಡನ ಜೊತೆ ವಾಸವಾಗಿರುತ್ತೇನೆ. ಕೋರನಾ ಇರುವುದರಿಂದ ಎದುರುದಾರರಿಗೆ ರಜೆ ಇತ್ತು ಎಂದರೆ ಎರಡು ತಿಂಗಳು ನಂತರ ಬೆಂಗಳೂರಿಗೆ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸರಿ. ನಂತರ ಎದುರುದಾರರು ನನ್ನನ್ನು ಕರೆದುಕೊಂಡು ಚಾಮರಾಜಪೇಟೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಚಾಮರಾಜಪೇಟೆಯಲ್ಲಿ ಒಂದು ತಿಂಗಳು ವಾಸವಾಗಿದ್ದೇವು. ನಾನು ಮತ್ತು ನನ್ನ ಗಂಡ ಮಾತ್ರ ವಾಸವಾಗಿದ್ದೇವು ಎಂದರೆ ಸರಿಯಲ್ಲ. ನಮ್ಮ ಅತ್ತೆ ಮಾವ ಸಹ ವಾಸವಾಗಿದ್ದರೂ ಎಂದು ನುಡಿಯುತ್ತಾರೆ. ನಾನು ನನ್ನ ಅತ್ತೆ ಮಾವ ನನ್ನ ಗಂಡ ಚೆನ್ನಾಗಿ ಇದ್ದೇವು ಎಂದರೆ ಸರಿಯಲ್ಲ.

4.	ನಮ್ಮ ಅತ್ತೆ ಮಾವ  ಮತ್ತು ಎದುರುದಾರರು ಕಿರುಕುಳ ನೀಡುತ್ತಾರೆ ಎಂದು ಆ ಸಮಯದಲ್ಲಿ ದೂರನ್ನು ಸಲ್ಲಿಸಿರುವುದಿಲ್ಲ.  ನನ್ನನ್ನು  ನನ್ನ ಗಂಡ, ಅತ್ತೆ, ಮಾವ, ಚೆನ್ನಾಗಿ ನೋಡಿಕೊಂಡರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನನ್ನು ತವರು ಮೆನಗೆ ಬಿಟ್ಟು ಬನ್ನಿ ಎಂದು ಎದುರುದಾರರಿಗೆ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

5.	ಚಾಮರಾಜಪೇಟೆಯಲ್ಲಿ ಇದ್ದಾಗ ಎದುರುದಾರಿಗೆ ನಾನು ತವರು ಮನೆಗೆ ಹೋಗುತ್ತೇನೆ ಎಂದು ಹೇಳಿದ ಕಾರಣ ನನ್ನ ತವರು ಮನೆಯ ದೊಡ್ಡ ಮಾವನ ಮಗಳು ಮುಸ್ಕಾನವರನ್ನು ನನ್ನ ಗಂಡನ ಮನೆಗೆ ಕರೆಸಿಕೊಂಡಿದ್ದರು ಎಂದರೆ ಸರಿ.  ಆ ಸಮಯದಲ್ಲಿ ಮುಸ್ಕಾನ ಸಮಕ್ಷಮದಲ್ಲಿ ಎದುರುದಾರ ಜೊತೆ ಜಗಳ ಮಾಡಿದ್ದು ನಂತರ ಮುಸ್ಕಾನವರು ನನ್ನ ತಂದೆ ತಾಯಿಯನ್ನು ಕರೆಯಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.  ನನ್ನ ತಾಯಿಯನ್ನು ಬೆಂಗಳೂರಿಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಂಡನ ಮೆನಯವರು ಫೋನ್ ರಿಸೀವ ಮಾಡದ ಕಾರಣ ಏನ ಆಗಿದೆ ಎಂದು ತಿಳಿದುಕೊಳ್ಳಲು ನನ್ನ ತಾಯಿಯು ಬೆಂಗಳೂರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ನನಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ.  ನಂತರ ಲಗ್ನ ಮಾಡಿಸಿದವರಾದ ನನ್ನ ಸೋದರ ಮಾವನನ್ನು ಕರೆಯಿಸಿ ನನಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ.  ನಾನು ಸೋದರ ಮಾವನ ಬುದ್ದವಾದ ಹೇಳಿದರೂ ಸಹ ಕೇಳಿಲ್ಲ ಎಂದರೆ ಸರಿಯಲ್ಲ.

6.	ನನ್ನ ದೊಡ್ಡಪ್ಪನ ಹೆಂಡತಿ ತೀರಿಕೊಂಡಿರುತ್ತಾರೆ ಎಂದರೆ ಸರಿ.  ಆ ಸಮಯದಲ್ಲಿ ಮರಣ ಕಾರ್ಯಕ್ಕೆ ಹೋಗಿರುತ್ತಾರೆ ಎಂದರೆ ಸರಿ.  ನನ್ನ ಅತ್ತೆ, ಮಾವ, ನನ್ನ ಗಂಡ ಸಹ ಬಂದಿರುತ್ತಾರೆ ಎಂದರೆ ಸರಿ.   ಸದರಿ ಕಾರ್ಯ ಮುಗಿದ ನಂತರ ನನ್ನ ಗಂಡನ ಜೊತೆಗೆ ಹೋಗದೆ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.  ನಂತರ ಎದುರುದಾರ ತಮ್ಮ ಹಿರಿಯೊಂದಿಗೆ ಬಂದು ಪಂಚಾಯತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

7.	ನನ್ನ ಮದುವೆಯ ಸಮಯದಲ್ಲಿ ನಾನು ಪ್ರಥಮ ಪಿ.ಯು.ಸಿ. ಮುಗಿಸಿರುತ್ತೇನೆ. ನನ್ನ ತಂದೆ-ತಾಯಿಗೆ ನಾನು ಒಬ್ಬಳೆ ಮಗಳು ಎಂದರೆ ಸರಿ. ನಾನು ಮೊದಲನೆ ಬಾರಿ ಗರ್ಭಿಣಿ ಆದಾಗ

ಎದುರುದಾರ ಬೆಂಗಳೂರಿನಲ್ಲಿ ಆಸ್ಪತ್ರೆಯಲ್ಲಿ ತೋರಿಸಿರುತ್ತಾನೆ ಎಂದರೆ ಸರಿ. ಆಸ್ಪತ್ರೆಯಲ್ಲಿ ತೋರಿಸಿದಾಗ ನನಗೆ ವಿಶ್ರಾಂತಿ ಪಡೆದುಕೊಳ್ಳಬೇಕೆಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ದೂರನ ಪ್ರಯಾಣ ಮಾಡಬಾರದು ಎಂದು ನನ್ನ ಗಂಡನು ನನ್ನನ್ನು ಕರೆದುಕೊಂಡು ವಿಮಾನದಿಂದ ಊರಿಗೆ ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿ. ನಾನು ನನ್ನ ಗಂಡನಿಗೆ ತವರುಮನೆಗೆ ಹೋಗುತ್ತೇನೆ ಎಂದು ಕಿರಿಕಿರಿ ಮಾಡಿದ ಕಾರಣ ವಿಮಾನದ ಮೂಲಕ ನನ್ನ ತವರುಮನೆಗೆ ಬಿಟ್ಟುಹೋಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬಾಗೇವಾಡಿಗೆ ವರ್ಗಾವಣೆ ಪಡೆದುಕೊಳ್ಳಿ ಎಂದು ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ಬೆಂಗಳೂರದಿಂದ ನನ್ನ ಗಂಡನ ಮನೆಗೆ ಬಂದ ನಂತರ 4-5 ದಿನಗಳು ಮಾತ್ರ ಇದ್ದೇನು. ನನ್ನ ಅತ್ತೆ-ಮಾವನ ಜೊತೆ ತವರುಮನೆಗೆ ಹೋಗುತ್ತೇನೆ ಎಂದು ಕಿರುಕುಳ ಮಾಡಿದ್ದರಿಂದ ನನ್ನ ತವರುಮನೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನು ಕಾರು ಮಾಡಿ ತವರುಮನೆಗೆ ಕಳುಹಿಸಿಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ನೀನು ಬೇಡ ಡಿವೈರ್ಸ ಕೊಡು ಎಂದು ಹೇಳಿ ನನಗೆ ಗಾಡಿಯಲ್ಲಿ ಕಳುಹಿಸಿಕೊಟ್ಟಿರುತ್ತಾರೆ. ಎದುರುದಾರನು ಕಿರುಕುಳ ನೀಡಿರುತ್ತಾನೆ ಎಂದು ಅದೇ ದಿನ ದೂರನ್ನು ಸಲ್ಲಿಸಿರುವುದಿಲ್ಲ. ನನ್ನ ಅರ್ಜಿಯಲ್ಲಿ ಎದುರುದಾರನ್ನು ಡಿವೈರ್ಸ ಕೊಡು ಎಂದು ಕಿರುಕುಳ ಮಾಡುತ್ತಿದ್ದಾನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಿಯಲ್ಲಿ ನಮೂದಿಸಿರುವುದಿಲ್ಲ. ನನ್ನ ಅತ್ತೆ-ಮಾವ ಮತ್ತು ನನ್ನ ಗಂಡ ಒಳ್ಳೆ ರೀತಿಯಿಂದ ನೋಡಿಕೊಳ್ಳುತ್ತಿದ್ದರು ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

9. ತವರುಮನೆಗೆ ಬಿಟ್ಟು ಹೋದ ನಂತರ ನನ್ನ ಗಂಡ 4-5 ತಿಂಗಳು ಬಂದಿರುವುದಿಲ್ಲ. ಬೆಂಗಳೂರಿಗೆ ನನ್ನ ಗಂಡನು ಹೋಗಿರುತ್ತಾನೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿ ಕರೆದುಕೊಂಡು ಹೋಗಿ ಬಿಟ್ಟುಬಂದಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರನು ನನ್ನನ್ನು ಕರೆಯಲು ತವರುಮನೆಗೆ ಬಂದಾಗ ನಾನು ತವರುಮನೆಯಲ್ಲಿ ಇರುತ್ತೇನೆ ಎಂದು ಕಿರಿಕಿರಿ ಮಾಡಿದ್ದು, ನನಗೆ ಬುದ್ಧಿವಾದ ಹೇಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ.

10. ಬೆಂಗಳೂರಿಗೆ ಹೋದ ನಂತರ 1 ತಿಂಗಳು ಮಾತ್ರ ಚನ್ನಾಗಿದ್ದೇವು. ಬೆಂಗಳೂರಿಗೆ ಬಂದ ನಂತರ ಸಹ ಎದುರುದಾರನ ಜೊತೆ ಕಿರುಕುಳ ಮಾಡಿ ತವರುಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಎದುರುದಾರನು ರೈಲ್ವೆ ಮೂಲ ತವರುಮನೆಗೆ ಬಂದಿರುತ್ತೇವೆ ಎಂದರೆ, ಸಾಕ್ಷಿಯು ರೈಲ್ವೆ ಸ್ಟೇಷಗೆ ಬಿಟ್ಟುಹೋಗಿರುತ್ತಾನೆ ಎಂದು ನುಡಿಯುತ್ತಾರೆ.

11. ಬೆಂಗಳೂರಿನಿಂದ ಇಂಡಿಗೆ ಹೋಗುವಾಗ ಎದುರುದಾರನಿಗೆ ಗೊತ್ತಾಗದ ಹಾಗೆ ಬಾಗೇವಾಡಿಗೆ ಇಳಿದು ತವರುಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರದಾರನು ಹಾಗೂ ಆತನ ತಂದೆ-ತಾಯಿ ಸಾಕಷ್ಟು ಬಾರಿ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದರು ಸಹ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆರಿಗೆ ಆದ ನಂತರ ನಾನು ಆಸ್ಪತ್ರೆಯಲ್ಲಿ ಇರುವಾಗ ಎದುರುದಾರ ಮತ್ತು ಅವರ ಕುಟುಂಬದವರು ನೋಡಲು ಬಂದರೆ ಸರಿಯಾಗಿ ಮಾತನಾಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಮೊದಲು ಮಗು ಜನಿಸಿದೆ ಎಂದು ತನ್ನ ಮನೆಗೆ ಕರೆದುಕೊಂಡು ಹೋಗಿ ಕಾರ್ಯಕ್ರಮ ಮಾಡಿರುತ್ತಾನೆ ಎಂದರೆ ಸರಿ. ನಂತರ ನನ್ನ ತಂದೆ-ತಾಯಿಯರು ಜಗಳ ಮಾಡಿ ನನ್ನನ್ನು ಗಂಡನ ಮನೆಯಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರು ನನ್ನ ತಂದೆ-ತಾಯಿ ಜೊತೆ ಜಗಳ ಮಾಡಿ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

12. ಎದುರುದಾರನು ಹಾಗೂ ಕುಟುಂಬದವರು ಸಾಕಷ್ಟು ಬಾರಿ ಕರೆಯಲು ಬಂದಿದ್ದರು ಸಹ ನಾನು ಗಂಡನ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾ ಪಂಚಾಯಿತಿ ಮಾಡಿ ಎದುರುದಾರನು ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದರೆ, ಸಾಕ್ಷಿಯು ನನ್ನ ಅತ್ತೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

13. ಮೊದಲನೇ ಹೆರಿಗೆ ಆದ ನಂತರ ನನ್ನ ಮಗುವಿಗೆ 11 ಗ್ರಾಂ ಬಂಗಾರ ಹಾಗೂ ನನಗೆ 3 ಗ್ರಾಂ ಬಂಗಾರ ಎದುರುದಾರ ಹಾಕಿರುತ್ತಾನೆ ಎಂದರೆ ಸರಿ. ಹೆರಿಗೆ ಆದ ನಂತರ 9 ತಿಂಗಳು ನನ್ನ ತವರುಮನೆಯಲ್ಲಿ ಇದ್ದು, ನಂತರ ಬೆಂಗಳೂರಿಗೆ ಎದುರುದಾರ ಕರೆದುಕೊಂಡು ಹೋಗಿರುತ್ತಾನೆ. ಬೆಂಗಳೂರಿಗೆ ಹೋದ ನಂತರ 3-4 ತಿಂಗಳು ವಾಸವಾಗಿದ್ದೇನು. ನನ್ನ ಮಗುವಿನ ಮೊದನೇ

ಹುಟ್ಟು ಹಬ್ಬಕ್ಕೆ ನನ್ನ ತಾಯಿ ಬಂದಿರುತ್ತಾರೆ. ನನ್ನ ತಾಯಿ ನನ್ನ ಮಗಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಸಿಟ್ಟಿಗೆ ಬಂದು ನನ್ನ ತಾಯಿ ಒಬ್ಬರೆ ಬಂದಿರುತ್ತಾರೆ ಎಂದರೆ ಸರಿಯಲ್ಲ.

14. 3 ತಿಂಗಳ ನಂತರ ಎದುರುದಾರ ತನ್ನ ಮನೆಯಲ್ಲಿ ತಂದು ಬಿಟ್ಟಿದ್ದು, ನಂತರ ಅಲ್ಲಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾನೆ. ನಾನು ನನ್ನ ಗಂಡನ ಮನೆಯಲ್ಲಿ ಇರುವಾಗ ಪರೀಕ್ಷೆ ಬರೆಯಲು ಹೋಗುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಹೆರಿಗೆಗೆ ತವರುಮನೆಗೆ ಹೋದಾಗ ಪರೀಕ್ಷೆ ಬರೆದಿರುತ್ತೇನೆ ಎಂದು ನುಡಿ ಯುತ್ತಾರೆ. ಬೆಂಗಳೂರಿಗೆ ಕರೆದುಕೊಂಡ ಹೋದ ನಂತರ ಅಲ್ಲಿ 3 ತಿಂಗಳು ವಾಸವಾಗಿದ್ದೇನು. ಎರಡನೇ ಬಾರಿ ಗರ್ಭಿಣಿಯಾದಾಗ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಎದುರುದಾರ ನೋಡಿಕೊಂಡಿರುತ್ತಾನೆ. ವಿಜಯಪುರದ ಚೌದ್ರಿ ಆಸ್ಪತ್ರೆಯಲ್ಲಿ 2 ನೇ ಮಗು ಜನಿಸಿರುತ್ತದೆ ಎಂದರೆ ಸರಿ. ಹೆರಿಗೆ ನಂತರ ನನ್ನ ಗಂಡನ ಮನೆಗೆ ಹೋಗಿರುತ್ತೇನೆ, ಅಲ್ಲಿ 6 ದಿನ ವಾಸವಾಗಿದ್ದೇನು. 6 ದಿನಗಳ ನಂತರ ನನ್ನ ತಾಯಿಯವರು ಮಹಿಳಾ ಸಂಘದವರನ್ನು ಕರೆದುಕೊಂಡು ಬಂದು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

15. ನನಗೆ ಎದುರುದಾರರು ಯಾವುದೇ ಕಿರುಕುಳ ನೀಡದ್ದೆ ಇದ್ದರು ಸಹ ನಾನೆ ಕಿರುಕುಳ ನೀಡಿ, ನನ್ನ ತವರುಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮಹಿಳಾ ಸಂಘದವರು ಎದುರುದಾರರ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಮಹಿಳಾ ಸಂಘದವರಿಗೆ ದೂರು ಸಲ್ಲಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನಿಂದ ನಾನೆ ಜಗಳ ಮಾಡಿ, ಎದುರುದಾರ ಟ್ರಾಸ್ಪರ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಸಾಕಷ್ಟು ಬಾರಿ ನನ್ನನ್ನು ಕರೆದುಕೊಂಡು ಹೋಗಲು ಬಂದಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರ ಮತ್ತು ನನ್ನ ಹಿರಿಯರು ನಮ್ಮ ನಡುವೆ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿ. ಹಿರಿಯರ ಸಮಕ್ಷಮ

ಎದುರುದಾರಿನಿಗೆ ಬೆಂಗಳೂರಿನಿಂದ- ಬ.ಬಾಗೇವಾಡಿಗೆ ಟ್ರಾನ್ಸ್ಫರ್ ತೆಗೆದುಕೊಳ್ಳಬೇಕೆಂದು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

16. ಬ.ಬಾಗೇವಾಡಿಯಲ್ಲಿ ನನ್ನ ತಂದೆಯ ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಎದುರುದಾರ ತಂದೆ-ತಾಯಿಗೆ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ, ಎದುರುದಾರನು ಒಬ್ಬನೇ ಕುಟುಂಬದಲ್ಲಿ ಕೆಲಸ ನಿರ್ವಹಿಸುತ್ತಾನೆ ಎಂದರೆ ಸರಿ. ಕುಟುಂಬದ ಜವಬ್ದಾರಿ ಎದುರುದಾರನ ಮೇಲೆ ಇರುತ್ತಾನೆ ಎಂದರೆ ಸರಿ. ಎದುರುದಾರನು ಎಲ್ಲ ವ್ಯವಸ್ಥೆಯನು ಮಾಡಿ ಕರೆದುಕೊಂಡು ಹೋಗಲು ತಯಾರು ಇರುತ್ತಾನೆ ಎಂದರೆ ನಾನು ಹೋಗಲು ತಯಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರನ ಆಸ್ತಿ ದಾಖಲಾತಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನನಗೆ ಎದುರುದಾರನು ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ವೈಧ್ಯಕೀಯ ಪ್ರಮಾಣ ಪತ್ರ ಹಾಜರಪಡಿಸಿರುವುದಿಲ್ಲ. ಎದುರುದಾರನಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ಯಾವಾಗ ಎಷ್ಟು ವರಪೋಚಾರ ಕೇಳಿರುತ್ತಾನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

17. 4 ನೇ ಎದುರುದಾರನು ಇಂಗಳಗಿ ಗ್ರಾಮದಲ್ಲಿ ಹಾಸಿಮ್ ರವರ ಜೊತೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿಯವರು ಇಂಗಳಗಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 2 ನೇ ಎದುರುದಾರನು ನನ್ನ ಮದುವೆ ಮುಂಚೆ ಪ್ಯಾರಾಲಿಸಿಸ್ ಆಗಿ ಅವರ ಆರೋಗ್ಯ ಸರಿ ಇರುವುದಿಲ್ಲ ಎಂದರೆ ಸರಿ. ನನ್ನ ಅತ್ತೆಗೆ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ವಯೋ ಸಮಸ್ಯಗಳು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಅತ್ತೆ-ಮಾವ ರವರನ್ನು ನೋಡಿಕೊಳ್ಳುವ ಜವಬ್ದಾರಿ ನನ್ನ ಗಂಡನ ಮೇಲೆ ಇರುತ್ತದೆ ಎಂದರೆ ಸರಿ. 7 ನೇ ಎದುರುದಾರಳು ನನ್ನ ಗಂಡನ ಚಿಕ್ಕಮ್ಮ ಆಗಬೇಕು. ಅವರು ಬೇರೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

18. ಎದುರುದಾರರು ನನಗೆ ಯಾವುದೆ ರೀತಿಯಿಂದ ತೊಂದರೆ ಕೊಡದೆ ಇದ್ದರು ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅನಾವಶ್ಯಕವಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ

ಸರಿಯಲ್ಲ . ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಯಾವ ದಿನಾಂಕದಂದು ಎದುರುದಾರರು ಹಲ್ಲೆ ಮಾಡಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನನಗೆ ಎದುರುದಾರರು ಎಷ್ಟು ವರದಕ್ಷಣೆ ಬೇಡುತ್ತಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿ.

19. ನಾನು Crl.Misc.72/2024 ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ 1ನೇ ಎದುರುದಾರನು ಆದೇಶದ ಪ್ರಕಾರ ಜೀವನಾಂಶ ನೀಡುತ್ತಿರುತ್ತಾನೆ ಎಂದರೆ ಸರಿ. ಎದುರುದಾರರು ನನಗೆ ಯಾವುದೇ ಕಿರುಕುಳ ನೀಡದೆ ಇದ್ದರು ಸಹ ಎದುರುದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರ ನನಗೆ ಎಲ್ಲ ಜೀವನಾಂಶ ನೀಡಿ, ನನ್ನನ್ನು ಕರೆದುಕೊಂಡು ಹೋಗಲು ತಯಾರಿರುತ್ತಾನೆ ಎಂದರೆ ಸಾಕ್ಷಿಯು ನಾನು ಹೋಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ಬರೆದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**